# ಅಪೂರ್ವ 'ಸಂಗೀತಿ'

ಇಲ್ಲಿಗೆ ಅರುವತ್ತೆಂಟು ವರ್ಷಗಳ ಹಿಂದೆ ಬರ್ಮಾ ದೇಶದಲ್ಲಿ ಒಂದು ಅಪೂರ್ವ 'ಬೌದ್ಧ ಸಂಗೀತಿ' ನಡೆಯಿತು. ಪಾಳಿಭಾಷೆಯಲ್ಲಿ 'ಸಜ್ಞಾಯನ' ಎಂದೂ ಇಂಗ್ಲಿಷಿನಲ್ಲಿ **Great Council** ಎಂದೂ ಇದನ್ನು ಕರೆಯುತ್ತಾರೆ. ಬೌದ್ಧಧರ್ಮ–ದರ್ಶನಗಳನ್ನು ಬಲ್ಲ ಸಾವಿರಾರು ಭಿಕ್ಷುಗಳು, ಮಹಾಪಂಡಿತರು, ನ್ಯಾಯವಿಶಾರದರೂ ಆ ದಿನ ಅಲ್ಲಿ ಸೇರಿದ್ದರು. ಇದು ಮಹಾಪಾಷಾಣ ಗುಹೆಯ ದಿವ್ಯ ಸಭಾಭವನದಲ್ಲಿ ನಡೆಯಿತು. 1954ನೇ ಮೇ 17 ಬೌದ್ಧರ ಇತಿಹಾಸದ ಸುವರ್ಣದಿನವೇ ಆಗಿತ್ತು. ಈ ಸಂಗೀತಿಯಲ್ಲಿ ಬೌದ್ಧ ಧರ್ಮ–ದರ್ಶನದ ಶ್ರದ್ಧಾಳುಗಳು ನೆರೆದಿದ್ದರು. ಆ ದಿವ್ಯ ಸಭಾಭವನದಲ್ಲಿ 6500 ಮಂದಿ ಕುಳಿತಿದ್ದರು. ದೇಶ–ವಿದೇಶಗಳಿಂದ ಆಮಂತ್ರಿತರಾದ ಅಪೂರ್ವ ವಿದ್ವಾಂಸರ ಮೇಳ ಅದಾಗಿತ್ತು. ಈ ಮೇಳಕ್ಕೆ ಭಾರತದಿಂದ ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ಆಮಂತ್ರಿತರಾಗಿದ್ದುದು ಒಂದು ವಿಶೇಷ. ಸಭಾಭವನದಲ್ಲಿ 2500 ಮಂದಿ ಭಿಕ್ಷುಗಳು ನೆರೆದಿದ್ದರು. ಸಂಗೀತಿಯ ಮಹಾನಾಯಕ ಬರ್ಮಾದೇಶದ ರಾಷ್ಟ್ರಪತಿ ಉ.ಬಾ. ಪ್ರಧಾನಿ ಥಾರೆನ್ ನು, ಇವರ ಜತೆಗೆ ಆ ದೇಶದ ಕೇಂದ್ರಮಂತ್ರಿಗಳು, ನ್ಯಾಯಮೂರ್ತಿಗಳು ಮುಂತಾದವರೆಲ್ಲಾ ಉಪಾಸಕರ ಗುಂಪಿನಲ್ಲಿ ಕುಳಿತಿದ್ದರು.

ಆ ಮಹಾಸಂಗೀತಿಯ ಕಾರ್ಯನಿರ್ವಾಹಕರು ಭದಂತ ನಾಗವಂಶನೆಂಬ ಪ್ರಗಲ್ಭ ಭಿಕ್ಷು. ಅವರು ಸಭೆಯ ಉದ್ದೇಶವನ್ನು ಪಾಳಿಭಾಷೆಯಲ್ಲೂ ಬರ್ಮೀ ಭಾಷೆಯಲ್ಲೂ ಸಭೆಗೆ ವಿವರಿಸಿದರು. ಅನಂತರ ಮಹಾವೃದ್ಧ, ತೊಂಬತ್ತು ವರ್ಷದ ಭದಂತ ವರ್ಣಮಹಾಥೇರ ಎಂಬ ಭಿಕ್ಷು ಎದ್ದು ನಿಂತರು. ಅವರು ಈ ಮಹಾಸಂಗೀತಿಯ ಅಧ್ಯಕ್ಷಸ್ಥಾನಕ್ಕೆ ಒಬ್ಬರನ್ನು ಸೂಚಿಸಿ ಆಹ್ವಾನಿಸಬೇಕಿತ್ತು. ಅವರು 'ಅಭಿಧ್ವಜ ಮಹಾರಾಷ್ಟ್ರಗುರು', 'ಅಗ್ರಮಹಾಪಂಡಿತ', ಶ್ರೀ ರೇವತ ಮಹಾಥೇರರೆಂಬ ಎಂಬತ್ತು ವರ್ಷದ ಪ್ರಖ್ಯಾತ ಭಿಕ್ಷುವಿನ ಹೆಸರನ್ನು ಸೂಚಿಸಿ, ಸಭಾಧ್ಯಕ್ಷತೆಯ ಸ್ಥಾನಕ್ಕೆ ಅವರನ್ನು ಆಹ್ವಾನಿಸಿದರು. ಸಂಪ್ರದಾಯ ಕ್ರಮದಂತೆ ನೆರೆದ ಭಿಕ್ಷುಗಳೂ ಉಪಾಸಕರೂ ಭದಂತರ ಸೂಚನೆಯನ್ನು ಅನುಮೋದಿಸಿದರು. ಆಗ ರೇವತ ಮಹಾಥೇರರು 'ಸ್ಥವಿರಾಸನ'ದಲ್ಲಿ ಬಂದು ಕುಳಿತರು. ಸಭೆಯ ಕಾರ್ಯಕಲಾಪಗಳನ್ನು ನಡೆಸಲು 'ಭಾರನಿಟ್ಠಾರಕ ಸಮಿತಿ'ಯೊಂದು ನಿಯಮಿತವಾಯಿತು. ಆ ಸಮಿತಿಯಲ್ಲಿ ರೇವತ ಮಹಾಥೇರರಲ್ಲದೆ, ಎಂಟುಜನ 'ಅಗ್ರಮಹಾಪಂಡಿತ'ರೂ ಕೂಡಿಕೊಂಡರು. ಸಮಿತಿಗೆ ಕಾರ್ಯದರ್ಶಿಯಾಗಿ ದಿಗ್ದಂತಿಯೆಂದು ಶ್ರುತಕೀರ್ತಿ ಪಡೆದ 'ವಿದ್ಯಾಲಂಕಾರ' ಎಂಬುವರು ಕಾರ್ಯದರ್ಶಿಗಳಾದರು. ಇವರಲ್ಲದೆ, ಇಂದ್ರಿಯಾಭಿವಂಶ, ಉತ್ತಮ, ಜ್ಞಾನೋತ್ತರ, ನಂದಿಸೇನ ಮುಂತಾದ ವಿಖ್ಯಾತರಾದ ಏಳು ಭಿಕ್ಷುಗಳು ಸೇರ್ಪಡೆಗೊಂಡರು. ಐನೂರು ಬರ್ಮೀ ಭಿಕ್ಷುಗಳು ಹತ್ತು ತಂಡಗಳಾಗಿ ಅವರೊಡನೆ ಕೂಡಿಕೊಂಡರು. ಈ ಒಂದೊಂದು ತಂಡವು ತ್ರಿಪಿಟಕದ ಒಂದೊಂದು ಖಂಡವನ್ನು ಪಾರಾಯಣ, ಪರಿಶೀಲನ ಮಾಡುವ ಕಾರ್ಯದಲ್ಲಿ ಉದ್ಯುಕ್ತವಾಯಿತು.

ಮಹಾಸಂಗೀತಿಯಲ್ಲಿ ಸಂಪ್ರದಾಯಾನುಸಾರ ಪ್ರಶ್ನೆಗಳನ್ನು ಹಾಕುವವರೊಬ್ಬರು ಇರುತ್ತಾರೆ. ಅವರು ಪೃಚ್ಛಕರು. ಇವರ ಪ್ರಶ್ನೆಗಳಿಗೆ ಉತ್ತರಿಸುವವರೊಬ್ಬರು ವಿಸ್ಸಜ್ಜಕರು ಇರುತ್ತಾರೆ. ಅವರು ಪೃಚ್ಛಕ ಮತ್ತು ವಿಸ್ಸಜ್ಜಕರು ಅಶೇಷ ತ್ರಿಪಿಟಕವನ್ನು ದೀರ್ಘಕಾಲ ಅಧ್ಯಯನ ಮಾಡಿ ಪಂಡಿತೋತ್ತಮರಾಗಿರಬೇಕು. ಸುತ್ತಪಿಟಕ, ವಿನಯಪಿಟಕ, ಅಭಿಧಮ್ಮಪಿಟಕ – ಈ ಮೂರು ಪಿಟಕಗಳು ಇಲ್ಲಿ ಪರಿಶೀಲನೆಗೊಳಪಡುತ್ತಿರುವ ಬೌದ್ಧಗ್ರಂಥಗಳು.

ಪೃಚ್ಛಕಸ್ಥಾನದಲ್ಲಿ ಭದಂತ ಜವನ ಎಂಬ ಭಿಕ್ಷು ವಿರಾಜಮಾನರಾಗಿದ್ದಾರೆ. ವಿಸ್ಸಜ್ಜಕ ಸ್ಥಾನದಲ್ಲಿ ತ್ರಿಪಿಟಕಧರ, ಧರ್ಮಭಾಂಡಾಸಾರಿಕ, ಮಹಾಪಂಡಿತ ಎಂದು ಹೆಸರಾಂತ 'ವಿಚಿತ್ರಸಾರ' ಎಂಬ ಮಹಾಭಿಕ್ಷು ಧಮ್ಮಾಸನದಲ್ಲಿ ಕುಳಿತಿದ್ದಾರೆ. ಆ ಭಿಕ್ಷುವಿನ ಸ್ಮೃತಿಯೊ ಅದ್ಭುತವಾದದ್ದು, ವಿಲಕ್ಷಣವಾದದ್ದು. ಇಡೀ ಬೈಬಲ್ಲಿಗೆ ಹನ್ನೊಂದು ಬಾರಿಯಷ್ಟು ದೀರ್ಘವಾದ ಪಾಳಿ ತ್ರಿಪಿಟಕ ಗ್ರಂಥ ಸಮುದಾಯವನ್ನು ಆ ಮಹಾಭಿಕ್ಷು ಮೊದಲಿನಿಂದ ಕೊನೆಯವರೆಗೆ ತಪ್ಪದಂತೆ, ಯಾವುದೇ ಗ್ರಂಥ ಸಹಾಯವಿಲ್ಲದೆ ಹೇಳಬಲ್ಲರು. ಇಷ್ಟು ಮಾತ್ರವಲ್ಲ, ತ್ರಿಪಿಟಕದ ಯಾವ ಭಾಗವನ್ನು ಬೇಕೆಂದರೆ ಉಳಿದ ಯಾವ ಭಾಗದೊಂದಿಗಾದರೂ ಸಮನ್ವಯ ಮಾಡುವ ಪ್ರತಿಭೆ ಅವರಿಗುಂಟು. ಪ್ರತಿಪದದ ನಿರ್ದಿಷ್ಟ ಅರ್ಥ, ಇಡೀ ಗ್ರಂಥದ ತಾತ್ಪರ್ಯ, ಇಂಗಿತ ಇವುಗಳೆಲ್ಲಾ ಮಹಾಭಿಕ್ಷುವಿಗೆ ಕರತಲಾಮಲಕ! ಸಭಾಪತಿಯಾದ ರೇವತರು ವಯೋವೃದ್ಧರೂ ಜ್ಞಾನದಲ್ಲಿ ಅಸದೃಶ ಪ್ರತಿಭಾಶಾಲಿಗಳಾದವರು. ನಿರಂತರ ತಪಶ್ಚರ್ಯೆಯಲ್ಲಿ ನಿರತರಾಗಿ 'ಧ್ಯಾನಯೋಗ'ದಲ್ಲಿ ಸಿದ್ಧರಾದವರು. ಅವರು ರಾಷ್ಟ್ರದಲ್ಲೇ ಪರಮಪೂಜ್ಯರಾದ ವ್ಯಕ್ತಿ. ಅವರು ಸಭೆಯನ್ನು ಅನ್ಯಾದೃಶವಾಗಿ ಹಲವು ತಿಂಗಳುಗಳ ಕಾಲ ನಡೆಸಿದರು. ಅದೊಂದು ಬೌದ್ಧಧರ್ಮದರ್ಶನದ ಮಹಾಸಾರಸ್ವತ ಯಜ್ಞವೇ ಆಗಿತ್ತು!

ಅದು ಬೌದ್ಧಧರ್ಮದ ಇತಿಹಾಸದಲ್ಲಿ ನಡೆದ ಆರನೆಯ ಮಹಾಸಂಗೀತಿ. ಆ ಸಂಗೀತಿಯಲ್ಲಿ ಉಳಿದ ಬೌದ್ಧರಾಷ್ಟ್ರಗಳು ಸಹಕರಿಸಿದುವು. ಸಂಗೀತಿಯ ಪರಿಶೀಲನಾ ಕಾರ್ಯಕ್ಕೆ ಸಿಂಹಳಲಿಪಿಯ ತ್ರಿಪಿಟಕ, ಥಾಯ್ಲೆಂಡ್‌ನ ಸಯಾಮೀಸ್ ಭಾಷೆಯ ತ್ರಿಪಿಟಕ, ಕಾಂಬೋಡಿಯಾದ ತ್ರಿಪಿಟಕ, ಇಂಗ್ಲೆಂಡಿನಲ್ಲಿ ಪ್ರಕಟವಾದ, ಪಾಳಿ ಟೆಕ್ಸ್ಟ್ ಸೊಸೈಟಿಯವರು ಆಂಗ್ಲಲಿಪಿಯಲ್ಲಿ ಪ್ರಕಟಿಸಿರುವ ತ್ರಿಪಿಟಕ ಮತ್ತು ಬರ್ಮಾದ ಮಾಯನ್ಮಾರ್‌ನಲ್ಲಿ ಅಮೃತಶಿಲಾಫಲಕಗಳ ಮೇಲೆ ಕೆತ್ತಿಸಿರುವ ಬರ್ಮಿಭಾಷೆಯ ತ್ರಿಪಿಟಕಗಳನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿತ್ತು. ಆ ಸಂಗೀತಿಯು ಸರ್ವಸಾಮಾನ್ಯವಾದ, ಸುಸಂಗತವಾದ, ಸಂಪ್ರದಾಯ ಶುದ್ಧವಾದ ತ್ರಿಪಿಟಕವನ್ನು ಪರಿಷ್ಕರಿಸಿತು. ಅನಂತರ ಪ್ರಪಂಚದ ನಾನಾ ಭಾಷೆಗಳಿಗೆ ಅದನ್ನು ಪರಿವರ್ತಿಸಿ 'ಬುದ್ಧಸಾಸನ'ವನ್ನು ಮಹಾಸಂಗೀತಿಯು ಅಂತಿಮಗೊಳಿಸಿತು. ಅನಂತರ ಪರಿಷ್ಕರಿಸಲ್ಪಟ್ಟ ತ್ರಿಪಿಟಕಗಳನ್ನು ಆಯಾಭಾಷೆಗಳಲ್ಲಿ ಪ್ರಕಟಿಸುವ ಕೆಲಸ ನಿರಂತರವಾಗಿ ನಡೆಯುತ್ತದೆ. ಬರ್ಮಾ, ಥಾಯ್ಲೆಂಡ್, ಸಿಂಹಳ, ಜಪಾನಿ, ಚೀಣಾ, ಭಾರತ ಮುಂತಾದ ದೇಶಗಳು ಈ ಮಹಾಸಂಗೀತಿ ಪರಿಷ್ಕರಿಸಿದ ತ್ರಿಪಿಟಕಗಳ ಪಠ್ಯವನ್ನು ಅಧಿಕೃತವೆಂದು ತಿಳಿಯುತ್ತದೆ. ಇದೊಂದು ಅಪೂರ್ವವೂ ಅನಿರ್ವಚನೀಯವೂ ಆದ ಬೌದ್ಧಮಹಾಸಂಗೀತಿ!

ಆರನೆಯ ಮಹಾಸಂಗೀತಿಗಿಂತ ಮುಂಚೆ ಐದನೆಯ ಮಹಾ ಸಜ್ಞಾಯನವು ಮೇ 1871ರಲ್ಲಿ ಮಾಯನ್ಮಾರ್ ದೇಶದ ರಾಜ ಮಿಂದನ್ ಮಿಂಗ್ ಎಂಬುವರ ನೇತೃತ್ವದಲ್ಲಿ ಮಯನ್ಮಾರ್‌ನಲ್ಲಿ ನಡೆಯಿತು. ಬೌದ್ಧ ಮಹಾಸಂಗೀತಿಯ ನೆನಪಿಗಾಗಿ ಬರ್ಮಿಭಾಷೆಯಲ್ಲಿ ಅಮೃತಶಿಲಾಫಲಕದಲ್ಲಿ ತ್ರಿಪಿಟಕಗಳನ್ನು ಕೆತ್ತಿಸಲಾಯಿತು. ಹೀಗಾಗಿ, ಬೌದ್ಧ ಮಹಾಸಂಗೀತಿಯು ಒಂದು ಅಪೂರ್ವ ಧಮ್ಮಸಜ್ಞಾಯನವೆಂದು ಹೆಸರು ಪಡೆದಿದೆ.

■ **ಪುರಂಜೀವಿ**

## ಮಾತೇ ಮುತ್ತು

- 'ನಮ್ಮನ್ನು ಪ್ರೀತಿಸುವವರಿದ್ದಾರೆ' ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.
  —ವಿಕ್ಟರ್ ಹ್ಯೂಗೊ
- ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.
  —ಪಿ. ಸೈರಸ್
- ನೀವು ಸೇವಿಸುವ ಅನ್ನವನ್ನು ಬೇಯಿಸುವ ನೀರು, ನಿಮ್ಮ ದುಡಿಮೆಯ ಬೆವರೋ ಅಥವಾ ಬೇರೆಯವರ ಕಣ್ಣೀರೋ!
  —ಡಿ.ವಿ.ಜಿ.
- ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.
  —ಥಾಮಸ್ ಕಾರ್ಲೈಲ್
- ಕೋಪವನ್ನು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.
  —ಇಂಗರ್ ಸಾಲ್
- ತಿಳಿದವಗೆ ಜಗವೆಲ್ಲ ರಸದ ಊಟ.
  —ಜಿ.ಎಸ್. ಶಿವರುದ್ರಪ್ಪ
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.
  —ಸ್ವಾಮಿ ವಿವೇಕಾನಂದ